ಸೆಲೆಬ್ರಿಟಿ

# ಶುದ್ಧ ಗಾಳಿಯ ರಾಯಭಾರಿ

■ ಪ್ರವೀಣ ಕುಲಕರ್ಣಿ



ಕೆಲವು ವರ್ಷಗಳ ಹಿಂದಿನ ಮಾತು. ತಮಿಳುನಾಡಿನ ತಿರುವಣ್ಣಾಮಲೈ ಪಟ್ಟಣದಲ್ಲಿ ಹುಡುಗಿಯೊಬ್ಬಳು ಶಾಲೆಯಿಂದ ಮನೆಗೆ ವಾಪಸಾಗುತ್ತಿದ್ದಳು. ಬೀದಿ ಬದಿಯಲ್ಲಿ ಇಸ್ತ್ರಿ ಮಾಡುವ ವ್ಯಕ್ತಿಯೊಬ್ಬ ನಿತ್ಯದ ದುಡಿಮೆಯನ್ನು ಮುಗಿಸಿ, ಉರಿಯುತ್ತಿದ್ದ ಇದ್ದಿಲನ್ನು ರಸ್ತೆ ಬದಿಯಲ್ಲೇ ಸುರಿಯುತ್ತಿರುವುದನ್ನು ಕಂಡಳು. ಅದರಿಂದ ಹೊಗೆ ಏಳುತ್ತಿರುವುದನ್ನೂ ಗಮನಿಸಿದಳು. ಆ ಹುಡುಗಿ ಕಂಡಂತಹ ದೃಶ್ಯಗಳಿಗೆ ನಾವು–ನೀವೂ ಆಗಾಗ ಮುಖಾಮುಖಿ ಆಗುತ್ತಲೇ ಇರುತ್ತೇವೆ ಮತ್ತು ಅದನ್ನು ನಿರ್ಲಕ್ಷಿಸಿ ಸುಮ್ಮನೆ ಮುನ್ನಡೆದಿರುತ್ತೇವೆ. ಆದರೆ, ಆ ಹುಡುಗಿ ‘ಇದಕ್ಕೇನು ಪರಿಹಾರ’ ಎಂದು ಪ್ರಶ್ನೆ ಹಾಕಿಕೊಂಡು ತಲೆ ಕೆರೆದುಕೊಳ್ಳಲು ಆರಂಭಿಸಿದಳು. ಅದರ ಫಲಶ್ರುತಿಯೇ ಅವಳು ಮೊನ್ನೆ ವಿಶ್ವಸಂಸ್ಥೆಯು ಏರ್ಪಡಿಸಿದ್ದ ಹವಾಮಾನ ಬದಲಾವಣೆ ಕುರಿತ ಶೃಂಗಸಭೆಯಲ್ಲಿ ಮಾತನಾಡುವ ಅವಕಾಶ ಗಿಟ್ಟಿಸಿದ್ದು.

ಅವಳ ಹೆಸರು ವಿನಿಶಾ ಉಮಾಶಂಕರ್. 15ರ ಹರೆಯದ ಈ ಹುಡುಗಿ, ತನ್ನ ಅನ್ವೇಷಣೆಯಿಂದ, ಅಷ್ಟೇ ಅಲ್ಲ, ಅಪ್ರತಿಮ ವಾಕ್ ಚಾತುರ್ಯದಿಂದ ಈಗ ಜಗತ್ತಿನಾದ್ಯಂತ ಸದ್ದು ಮಾಡುತ್ತಿದ್ದಾಳೆ.

ಇಸ್ತ್ರಿ ಮಾಡುವ ಅಂಗಡಿ ಇಟ್ಟುಕೊಂಡವರು ಈಗಲೂ ಕಬ್ಬಿಣದ ಇಸ್ತ್ರಿ ಪೆಟ್ಟಿಗೆಯನ್ನು ಇಟ್ಟುಕೊಂಡು, ಇದ್ದಿಲಿನಿಂದ ಅದನ್ನು ಕಾಯಿಸಿ ಬಳಸುವುದು ರೂಢಿ. ಭಾರತದ ಯಾವ ಊರಿಗೆ ಹೋದರೂ ಕಬ್ಬಿಣದ ಈ ಇಸ್ತ್ರಿ ಪೆಟ್ಟಿಗೆಗಳು ಕಣ್ಣಿಗೆ ಬೀಳದಿರುವುದಿಲ್ಲ. ಅದರಿಂದ ಹೊಗೆ ಹೊರಹೋಗುವುದನ್ನೂ ಇಸ್ತ್ರಿ ಮಾಡುವಾತ ಆಗಾಗ ಆ ಇದ್ದಿಲಿನ ಬೆಂಕಿಗೆ ಊದಿ ಕಣ್ಣು ಕೆಂಪು ಮಾಡಿಕೊಳ್ಳುವುದನ್ನೂ ನಾವೆಲ್ಲ ನೋಡುತ್ತಲೇ ಇರುತ್ತೇವೆ. ಭಾರತದ ಮಧ್ಯಮ ವರ್ಗದ ಕುಟುಂಬಗಳು ಬಾಳುತ್ತಿರುವ ಬೀದಿಗಳೆಂದರೆ ತಟ್ಟನೆ ನೆನಪಿಗೆ ಬರುವ ಎರಡು ನೋಟಗಳೆಂದರೆ ಒಂದು ಕಬ್ಬಿಣದ ಇಸ್ತ್ರಿಪೆಟ್ಟಿಗೆ ಅಂಗಡಿ, ಮತ್ತೊಂದು ತರಕಾರಿಯನ್ನು ಹೊತ್ತ ತಳ್ಳುವ ಗಾಡಿ. ಈಗ ಈ ಚಿತ್ರಣವನ್ನು ಉನ್ನತೀಕರಿಸಲು ಹೊರಟಿದ್ದಾಳೆ ವಿನಿಶಾ.

ತಿರುವಣ್ಣಾಮಲೈನ ಈ ಹುಡುಗಿ ಆರು ತಿಂಗಳುಗಳ ಕಾಲ ತಲೆ ಕೆಡಿಸಿಕೊಂಡು ‘ಐರನ್ ಮ್ಯಾಕ್ಸ್’ ಎಂಬ ಸೌರಶಕ್ತಿ ಆಧರಿತ ಇಸ್ತ್ರಿಪೆಟ್ಟಿಗೆಯ ಬಂಡಿಯನ್ನು ಆವಿಷ್ಕರಿಸಿದ್ದಾಳೆ. ಈ ಅನ್ವೇಷಕಿಗೆ ಆಗ ಬರಿ 12ರ ಹರೆಯ. ಇದ್ದಿಲಿನ ಇಸ್ತ್ರಿ ಪೆಟ್ಟಿಗೆಯಿಂದಾಗುವ ವಾಯುಮಾಲಿನ್ಯವನ್ನು ಈ ‘ಬಂಡಿ’ ಶೂನ್ಯಕ್ಕೆ ತರಲಿದೆ ಎನ್ನುವುದು ಅವಳ ಆತ್ಮವಿಶ್ವಾಸದ ನುಡಿ. ಸೈಕಲ್ ಮೇಲೆ ಬಾಕ್ಸ್ ಆಕಾರದ ಟೇಬಲ್ ಮಾಡಿ, ಅದಕ್ಕೊಂದು ಸೋಲಾರ್ ಹೊದಿಕೆ ಹೊದಿಸಿದ ವಿನ್ಯಾಸವನ್ನು ವಿನಿಶಾ ರೂಪಿಸಿದ್ದಾಳೆ. ಐದು ಗಂಟೆಗಳವರೆಗೆ ಸೂರ್ಯನ ಕಿರಣಗಳು ಆ ಸೋಲಾರ್ ಹೊದಿಕೆಗಳ ಮೇಲೆ ಬಿದ್ದರೆ ಸಾಕು, ಇಡೀ ದಿನದ ಇಸ್ತ್ರಿಗೆ ಬೇಕಾಗುವಷ್ಟು ‘ಶಕ್ತಿ’ ಅದರಲ್ಲಿ ಸಂಗ್ರಹವಾಗುತ್ತದೆ. ಪ್ರಖರ ಬೆಳಕಿದ್ದಾಗ ‘ಶಕ್ತಿ’ಯನ್ನು ಸಂಗ್ರಹಿಸಿಕೊಂಡು ರಾತ್ರಿ ವೇಳೆಯಲ್ಲೂ ಇಸ್ತ್ರಿ ಮಾಡಲು ಅದನ್ನು ಬಳಸಲು ಸಾಧ್ಯವಾಗುವಂತೆ ‘ಐರನ್ ಮ್ಯಾಕ್ಸ್’ ಅನ್ನು ವಿನ್ಯಾಸಗೊಳಿಸಲಾಗಿದೆ.

ವಿನಿಶಾಳ ಈ ಆವಿಷ್ಕಾರ ಬ್ರಿಟನ್ ರಾಜಕುಮಾರ ವಿಲಿಯಮ್ಸ್ ಹೆಸರಿನಲ್ಲಿ ಬಿಬಿಸಿಯು ನೀಡುವ ‘ಪ್ರಿನ್ಸ್ ವಿಲಿಯಮ್ಸ್ ಅರ್ಥ್‌ಶಾಟ್ ಪ್ರಶಸ್ತಿ’ ಸ್ಪರ್ಧೆಯ ಅಂತಿಮ ಸುತ್ತಿಗೆ ಆಯ್ಕೆಯಾಗಿತ್ತು. ‘ಶುದ್ಧಗಾಳಿ’ ವರ್ಗದಲ್ಲಿ ವಿನಿಶಾ ಅನ್ವೇಷಣೆ ಅಂತಿಮ ಸುತ್ತಿಗೆ ಆಯ್ಕೆಯಾದ ಸಾಧನೆಯೇ ಅವಳನ್ನು ಶೃಂಗಸಭೆಯ ವೇದಿಕೆಗೂ ಕರೆತಂದಿತು.

‘ಜಾಗತಿಕ ತಾಪಮಾನವನ್ನು ತಡೆಗಟ್ಟಲು ತಕ್ಷಣವೇ ಕ್ರಮ ತೆಗೆದುಕೊಳ್ಳಿ, ಭೂಮಿಯನ್ನು ರಕ್ಷಿಸಿ. ನೀವು ಕಾರ್ಯತತ್ಪರರಾಗದಿದ್ದರೆ, ನಾವೇ ಈ ಹೋರಾಟವನ್ನು ಮುನ್ನಡೆಸುತ್ತೇವೆ’ ಎಂದು ವಿಶ್ವನಾಯಕರಿಗೆ ಸವಾಲು ಹಾಕುವ ಧೈರ್ಯವನ್ನು ಅವಳು ತೋರಿದಳು. ‘ನೀವು ತಡಮಾಡಿದರೆ, ಭೂತಕಾಲದಲ್ಲೇ ಉಳಿದರೆ, ನಾವು ಮುನ್ನಡೆಯುತ್ತೇವೆ. ಆದರೆ, ದಯವಿಟ್ಟು ನಮ್ಮ ಆಹ್ವಾನ ಸ್ವೀಕರಿಸಿ ಕಾರ್ಯತತ್ಪರರಾಗಿ, ಅದಕ್ಕಾಗಿ ನೀವು ಎಂದಿಗೂ ವಿಷಾದಿಸುವ ಪ್ರಮೇಯ ಬರುವುದಿಲ್ಲ’ ಎಂದೂ ತಾಕೀತು ಮಾಡಿದಳು.

‘ನಾನು ಪೃಥ್ವಿಗೆ ಸೇರಿದವಳು’ ಎನ್ನುವ ಮೂಲಕ ಪರಿಸರವನ್ನು ಸಂರಕ್ಷಿಸುವ ವಿಷಯದಲ್ಲಿ ಜಗತ್ತಿನ ಯಾವ ಗಡಿಗಳೂ ಅಡ್ಡಿ ಆಗಬಾರದು ಎನ್ನುವ ಸಂದೇಶವನ್ನೂ ಅವಳು ಸಾರಿದಳು. ವಿನಿಶಾಗೆ ಮಾತನಾಡಲು ಸಿಕ್ಕಿದ್ದು ಐದೇ ನಿಮಿಷ. ಅಷ್ಟರಲ್ಲಿ ಹೇಳಬೇಕಾದದ್ದನ್ನು ಹಸಿ ಗೋಡೆಯಲ್ಲಿ ಹರಳು ನೆಟ್ಟಂತೆ ಹೇಳಿದ ಆಕೆ, ‘ಶುದ್ಧ ಗಾಳಿ’ಯ ರಾಯಭಾರಿಯಂತೆ ಗೋಚರಿಸಿ, ಜಗತ್ತಿನ ಹೃದಯವನ್ನೇ ಗೆದ್ದಳು.

ಮೂಕ ಪೃಥ್ವಿಗೆ ಮಾತು ಕೊಟ್ಟ ಕಿಶೋರಿ ಗ್ರೇತಾ ಥನ್‌ಬರ್ಗ್‌ನಂತೆಯೇ ವಿನಿಶಾ ಕೂಡ. ಹದಿನೈದು ವರ್ಷದವಳಿದ್ದಾಗ ಗ್ರೇತಾ ಒಬ್ಬಂಟಿಯಾಗಿ ಧರಣಿ ಕುಳಿತಿದ್ದಳು. ಅವಳ ಮುಷ್ಕರವನ್ನು ಬೆಂಬಲಿಸಿ 130 ರಾಷ್ಟ್ರಗಳಲ್ಲಿ ಎಳೆಯರು ಬೀದಿಗೆ ಬಂದಿದ್ದರು. ವಿಶ್ವಸಂಸ್ಥೆಯಲ್ಲಿ ಗ್ರೇತಾ ಸಹ ಭಾಷಣ ಮಾಡಿದ್ದಳು. ನೊಬೆಲ್ ಪ್ರಶಸ್ತಿಗೂ ನಾಮನಿರ್ದೇಶನಗೊಂಡಿದ್ದಳು. ಗ್ರೇತಾ, ವಿನಿಶಾ ಅವರಂತಹ ಹೊಸ ಪೀಳಿಗೆಯ ಪ್ರತಿಭೆಗಳು ಪೃಥ್ವಿ, ಗಾಳಿಗಾಗಿ ಧ್ವನಿ ಎತ್ತುತ್ತಿರುವುದು ಉಳಿದವರ ಹೊಣೆಗಾರಿಕೆಯನ್ನೂ ನೆನಪಿಸುವಂತಿದೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65